ಕನ್ನಡ ಸಂಸ್ಕೃತಿಯ ಬಹುಶ್ರುತ ಪರಂಪರೆಗೆ ಸೇರಿದ ಕೆ.ವಿ. ತಿರುಮಲೇಶ್ ಮೂಲತಃ ಕವಿ. ವಿಮರ್ಶೆ ಹಾಗೂ ಭಾಷಾಶಾಸ್ತ್ರಕ್ಕೂ ಅವರಿಂದ ಮಹತ್ವದ ಕೊಡುಗೆ ಸಂದಿದೆ. ಕಾಸರಗೋಡಿನ ಕಾರಡ್ಕದ ಅವರು, ತಮ್ಮ ಜೀವನದ ಬಹುತೇಕ ಭಾಗವನ್ನು ಕರ್ನಾಟಕದಾಚೆಯೇ ಕಳೆದಿದ್ದರೂ, ಕನ್ನಡ ಸಂವೇದನೆಯೊಂದಿಗೆ ಕೊನೆಯವರೆಗೂ ನಿಕಟ ಸಂಪರ್ಕ ಉಳಿಸಿಕೊಂಡವರು. ಹೈದರಾಬಾದ್‌ನ 'ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಅಂಡ್ ಫಾರಿನ್ ಲ್ಯಾಂಗ್ವೇಜಸ್'ನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದರು. 'ಮುಖವಾಡಗಳು', 'ವಠಾರ', 'ಮಹಾಪ್ರಸ್ಥಾನ', ಮುಖಾಮುಖಿ', 'ಅವಧ', 'ಪಾಪಿಯೂ' ಅವರ ಪ್ರಸಿದ್ಧ ಕವನ ಸಂಕಲನಗಳು. 'ಅರಬ್ಬೀ' ಹಾಗೂ 'ಅಕ್ಷಯಕಾವ್ಯ' ಮಹಾಕಾವ್ಯ ಸ್ವರೂಪದ ಕಾವ್ಯಸಂಗ್ರಹಗಳು. 'ನಾಯಕ ಮತ್ತು ಇತರರು', 'ಕೆಲವು ಕಥಾನಕಗಳು', 'ಕಳ್ಳಿಗಿಡದ ಹೂ' ಅವರ ಕೆಲವು ಕಥಾಸಂಕಲನಗಳು. 'ಆರೋಪ', 'ಅನೇಕ', 'ತರಂಗಾಂತರ' ಕಾದಂಬರಿಗಳು. 'ಅಕ್ಷಯ ಕಾವ್ಯ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಮಕ್ಕಳಿಗಾಗಿಯೂ ಹತ್ತಾರು ಕೃತಿಗಳನ್ನು ರಚಿಸಿರುವ ತಿರುಮಲೇಶರ ಅಂಕಣ ಬರಹಗಳೂ ಪುಸ್ತಕಗಳಾಗಿವೆ.

ವಾರಗಳ ಕಾಲ ತಿರುವನಂತಪುರದ ಕಾಟನ್ ಹಿಲ್ಸ್‌ನಲ್ಲಿ ಒಟ್ಟಿಗೆ ಇದ್ದೆವು. ಅದು 1987ರಲ್ಲಿ ನಡೆದ ಪ್ರಥಮ 'ರಾಷ್ಟ್ರೀಯ ಭಾಷಾಂತರ ಕಮ್ಮಟ.' ಅಲ್ಲಿ ನಮ್ಮ ಜೊತೆಗೆ ಶಾಂತಿನಾಥ ದೇಸಾಯಿ ಕೂಡ ಕೆಲವು ದಿನಗಳಿದ್ದರು. ನಮ್ಮ ಮೂವರ ಆ ದಿನಗಳ ಬಗ್ಗೆ ಬೇರೆಯೇ ಒಂದು ಲೇಖನ ಬರೆಯಬಹುದು. ಅಲ್ಲಿ ತಿರುಮಲೇಶರ ಹತ್ತಿರದ ಪರಿಚಯವಾದ ನಂತರ, ವಯಸ್ಸಿನಲ್ಲಿ ತುಂಬ ಹಿರಿಯರಿದ್ದರೂ ತಮ್ಮ ಅತ್ಯಂತ ಖಾಸಗಿ ಸಂಗತಿಗಳನ್ನು ಸಹ ಹಂಚಿಕೊಳ್ಳುವಷ್ಟು ಆತ್ಮೀಯ ಮತ್ತು ಗಾಢ ಗೆಳೆತನ ನಮ್ಮಿಬ್ಬರದಾಯಿತು. ನಮ್ಮ ನಡುವೆ ಪತ್ರಗಳ ಓಡಾಟ ಸಾಮಾನ್ಯವಾಗಿತ್ತು. ಆತ್ಮೀಯರ ಜೊತೆಗಿನ ಅವರ ಪತ್ರ ವ್ಯವಹಾರ ಒಂದು ವ್ರತದಂತಿತ್ತು. ಅದರಲ್ಲೂ ಹೊಸ ಪೀಳಿಗೆಯವರ ಜೊತೆ ವಿಶೇಷವಾಗಿ ಸಂಪರ್ಕದಲ್ಲಿರುತ್ತಿದ್ದರು. ಅವರು ನಿವೃತ್ತರಾದ ಬಳಿಕ ವಿದೇಶಗಳಿಗೆ ಹೋದರು. ನನ್ನ ತಾಪತ್ರಯಗಳಲ್ಲಿ ನಾನು ಮುಳುಗಿದೆ. ಸರಿಸುಮಾರು ಅದೇ ವೇಳೆಗೆ ಪರಸ್ಪರ ಪತ್ರ ವಿನಿಮಯವನ್ನು ಇಡೀ ಜಗತ್ತೇ ಮರೆಯತೊಡಗಿತು. ನಾವಿಬ್ಬರೂ ಪರಸ್ಪರ ಕಳೆದುಹೋದೆವು. ಇದು ನನ್ನ ಮಟ್ಟಿಗೆ ಒಂದು ವಿಷಾದದ ಸಂಗತಿ. ಅವರಿಗೆ ನಾನು ಹೇಳಬೇಕಾದದ್ದು, ಅವರು ನನಗೆ ಹೇಳಬೇಕಾದದ್ದು ಬೆಟ್ಟದಷ್ಟಿತ್ತು. ವಿಶೇಷವಾಗಿ ಅವರ ಮೂವರು ಮುದ್ದಿನ ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಮದುವೆ, ನಿವೃತ್ತಿಯ ನಂತರ ಹೈದರಾಬಾದಿನ ಯಾವಲ್ಲಿ ವಾಸಮಾಡತೊಡಗಿದರು ಇತ್ಯಾದಿ, ಇತ್ಯಾದಿ ನೂರೆಂಟು. ಅವರ ಹಿರಿಯ ಮಗಳು ಸಹಪಾಠಿ ಚಿತ್ರ ಕಲಾವಿದನನ್ನು ಮದುವೆಯಾದ ಸುದ್ದಿ ತಿಳಿಯಿತು. ಆ ಹುಡುಗ ಬೇರೆ ಜಾತಿಯ ತೆಲುಗು ಭಾಷಿಕ. ಅವರ ಬೀಗನೂ ನನ್ನ ಪರಿಚಯದ ಒಬ್ಬ ಕವಿ. ಕೆಲವು ವರ್ಷಗಳ ಕೆಳಗೆ ಆತ ಕೇರಳದ ಯಾವುದೋ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ರಾತ್ರಿಯೂಟದಲ್ಲಿ ಸಿಕ್ಕ. 'ಮಗ, ಸೊಸೆ ಹೇಗಿದಾರೆ?' ಅಂತ ವಿಚಾರಿಸಿದಾಗ ಅವನು ತಣ್ಣಗೆ, 'ಒಂದೆರಡು ದಿನಗಳಲ್ಲಿಯೇ ಡಿವೋರ್ಸ್ ಆಗಲಿದ್ದಾರೆ' ಅಂದುಬಿಟ್ಟ. ತಿರುಮಲೇಶ್ ಮತ್ತು ನಿರ್ಮಲಾ ಎಂಬ ಮೃದು ಜೀವಿಗಳ ಬಗ್ಗೆ ಚೆನ್ನಾಗಿಯೇ ತಿಳಿದಿದ್ದ ನನ್ನ ಮನಸ್ಸಿಗೆ ಸ್ವಲ್ಪ ನೋವಾಯಿತು. ಆ ಸಂದರ್ಭವನ್ನು ಅನೇಕ ಬಾರಿ ನೆನಪು ಮಾಡಿಕೊಳ್ಳುತ್ತೇನೆ: ಆ ಬೀಗನ ಮುಖದಲ್ಲಿ 'ತಣ್ಣನೆಯ' ಭಾವನೆಯಲ್ಲದ ನೋವು, ವಿಷಾದದ ಸುಳಿವೇನಾದರೂ ಇತ್ತೇ ಎಂಬುದು ಕೊನೆಗೂ ತಿಳಿಯಲಿಲ್ಲ. ಬದುಕಿನ ಸುಖ ದುಃಖಗಳನ್ನು, ಅಪಾರ ಸಾಹಿತ್ಯವನ್ನು ಚೆನ್ನಾಗಿ ಬಲ್ಲ ತಿರುಮಲೇಶ್ ಕೌಟುಂಬಿಕ ಆಘಾತವನ್ನು ಸಮಚಿತ್ತದಲ್ಲೇ ಸ್ವೀಕರಿಸಿರುತ್ತಾರೆಂಬುದು ನನ್ನ ತಿಳಿವಳಿಕೆ.

ತಿರುಮಲೇಶರ ಸಾಹಿತ್ಯ ರಚನೆ, ವಿದೇಶ ಯಾತ್ರೆಗಳ ಹೊತ್ತಿನಲ್ಲೆಲ್ಲಾ ಅವರ ಶ್ರೀಮತಿ ನಿರ್ಮಲಾ ಸಮರ್ಥವಾಗಿಯೇ ಕೌಟುಂಬಿಕ ರಥವನ್ನು ಮುನ್ನಡೆಸಿರುವ ಬಗ್ಗೆ ನನಗೆ ಯಾವ ಅನುಮಾನಗಳೂ ಇಲ್ಲ. ಅವರು ಹೊರಗೆ ಶಾಲೆಯಲ್ಲಿ ಕೆಲಸ ಮಾಡಿಕೊಂಡೂ ಅತ್ಯಂತ ಯಶಸ್ವಿಯಾಗಿ ಮನೆವಾರ್ತೆ ನಡೆಸುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೇನೆ. ಅವರ